ಕರ್ನಾಟಕ ಸರ್ಕಾರ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ: ಟಿಸಿಎನ್/12/2018-19 ದಿನಾಂಕ: 21 -05-2019

### ಅಧಿಕೃತ ಜ್ಞಾಪನಾ ಪತ್ರ

ವಿಷಯ:- ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 09-02-2017 ರ ತೀರ್ಪಿನ ಸಿವಿಲ್ ಅಪೀಲ್ ಸಂಖ್ಯೆ: 2368/2011 ಪ್ರಕರಣದ ಹಿನ್ನೆಲೆಯಲ್ಲಿ ನೇತ್ರಾಧಿಕಾರಿಗಳ ಹುದ್ದೆಗೆ ಹಿಂಬಡ್ತಿಗೊಳಗಾದ ಸಿಬ್ಬಂದಿಗಳಿಗೆ ಹಿರಿಯ ನೇತ್ರಾಧಿಕಾರಿಗಳ ಹುದ್ದೆಯಲ್ಲಿ ಮುಂದುವರೆಸಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ:-
1. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಫೀಲು ಸಂಖ್ಯೆ: 2368/2011-ಬಿ.ಕೆ.ಪವಿತ್ರ ಮತ್ತಿತರರು ವಿರುದ್ಧ-ಯೂನಿಯನ್ ಆಫ್ ಇಂಡಿಯಾ ಮತ್ತು ಸಂಬಂದಿಸಿದ ಇತರ ಪ್ರಕರಣಗಳಲ್ಲಿ ದಿ: 09-02-2017 ರಂದು ನೀಡಿದ ತೀರ್ಪು.
2. ಸರ್ಕಾರದ ಸುತ್ತೋಲೆ ಸಂ: ಸಿಆಸುಇ/639/ಸೇನೆನಿ/2017 ದಿ: 27-03-2018 ಮತ್ತು 04-04-2018
3. ಆಯುಕ್ತಾಲಯದ ಅ.ಜ್ಞಾಪತ್ರ ಸಂ: ಟಿಸಿಎನ್/12/2018-19 ದಿನಾಂಕ: 17-04-2018 (ಅನುಭಂದ-1)
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್‌ಆರ್‌ಎಸ್/2018 ಬೆಂಗಳೂರು ದಿ: 27-02-2019
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್‌ಆರ್‌ಎಸ್/2018 ಬೆಂಗಳೂರು ದಿ: 05-03-2019
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್‌ಆರ್‌ಎಸ್/2018 ಬೆಂಗಳೂರು ದಿ: 15-05-2019

******

ಮೇಲೆ ಓದಲಾದ ಉಲ್ಲೇಖ(1) ರಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ: 2368/2011 ಕುರಿತಂತೆ ದಿ: 09-02-2017 ರಂದು ನೀಡಿರುವ ತೀರ್ಪಿನ ಅನ್ವಯ ಹಾಗೂ ಉಲ್ಲೇಖ (2) ರಲ್ಲಿನ ಸುತ್ತೋಲೆಯಲ್ಲಿ ನೀಡಿರುವ ಸೂಚನೆಗಳನ್ವಯ ಪರಿಷ್ಕರಿಸಲಾದ ಜ್ಯೇಷ್ಠತಾ ಪಟ್ಟಿಯನ್ನಾದರಿಸಿ ಆಯುಕ್ತಾಲಯದ ಉಲ್ಲೇಖ (3) ರ ಅ.ಜ್ಞಾ ಪತ್ರದಲ್ಲಿ ಹಿರಿಯ ನೇತ್ರಾಧಿಕಾರಿಗಳ ಹುದ್ದೆಯಿಂದ ನೇತ್ರಾಧಿಕಾರಿಗಳ ಹುದ್ದೆಗೆ ಇಳಿಸಿ ಹಿಂಬಡ್ತಿ ಆದೇಶ ಹೊರಡಿಸಲಾಗಿತ್ತು

ಉಲ್ಲೇಖ (4) ರಲ್ಲಿನ ಸರ್ಕಾರದ ಆದೇಶ ದಿ: 27-02-2019 ರನ್ವಯ ಹಿಂಬಡ್ತಿಗೆ ಒಳಗಾದ ಅಧಿಕಾರಿ/ನೌಕರರನ್ನು ಅವರು ಹಿಂದೆ ಧಾರಣ ಮಾಡಿದ ವೃಂದಗಳಿಗೆ ಮರು ನಿಯುಕ್ತಿಗೊಳಿಸಲು ಹಾಗೂ ಅವರಿಗೆ ಅರ್ಹತಾ ದಿನಾಂಕವನ್ನು ನೀಡಿ ಅಂತಹ ಅರ್ಹತಾ ದಿನಾಂಕದ ಆಧಾರದ ಮೇಲೆ ಕೆಳ ಹಂತದ ವೃಂದಕ್ಕೆ ಹಿಂಬಡ್ತಿಗೊಳಿಸಿದ್ದಲ್ಲಿ ಅಂತಹ ಸರ್ಕಾರಿ ನೌಕರರನ್ನು ಅವರು ಹಿಂಬಡ್ತಿ ಹೊಂದಿದ ನಿಕಟ ಪೂರ್ವದಲ್ಲಿ ಧಾರಣ ಮಾಡಿದ್ದ ವೃಂದಕ್ಕೆ ಹಿಂಬಡ್ತಿ ಹೊಂದಿದ ದಿನಾಂಕದಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಮರು ಸ್ಥಳ ನಿಯುಕ್ತಿಗೊಳಿಸುವಂತೆ ಹಾಗೂ ಅವರು ಕೆಳ ಹಂತದ ವೃಂದಗಳಿಗೆ ಹಿಂಬಡ್ತಿಗೊಳ್ಳುವ ಪೂರ್ವದ ವೃಂದದ ವೇತನ ಶ್ರೇಣಿಯಲ್ಲಿ ಮತ್ತು ವೇತನದ ಅದೇ ಹಂತದಲ್ಲಿ ಅವರು ವೇತನವನ್ನು ಪಡೆಯುವುದನ್ನು ಮುಂದುವರಿಸತಕ್ಕದ್ದು ಎಂದು ಆದೇಶಿಸಲಾಗಿದೆ.

ಪ್ರಸ್ತುತ ಆರೋಗ್ಯ ಇಲಾಖೆಯಲ್ಲಿ ಹಿರಿಯ ನೇತ್ರಾಧಿಕಾರಿ ವೃಂದದ ಹುದ್ದೆಗಳು ಖಾಲಿ ಇರುವುದರಿಂದ, "ಸೂಪರ್ ನ್ಯೂಮರಿ" ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ಈ ಮೇಲಿನ ಅಂಶಗಳನ್ನು ಪರಿಶೀಲನೆ ಮಾಡಿಕೊಂಡು ಮೇಲೆ ಓದಲಾದ ಉಲ್ಲೇಖ (6) ರಲ್ಲಿ ನೀಡಲಾದ ಮಾರ್ಗಸೂಚಿಯಂತೆ ನೇತ್ರಾಧಿಕಾರಿಗಳ ಹುದ್ದೆಗೆ ಹಿಂಬಡ್ತಿಗೊಳಗಾಗಿದ್ದ ನೌಕರರುಗಳಿಗೆ ಹಿಂಬಡ್ತಿಗೊಳಗಾಗುವ ನಿಕಟ ಪೂರ್ವದಲ್ಲಿ ಹೊಂದಿದ್ದ ಹಿರಿಯ ನೇತ್ರಾಧಿಕಾರಿಗಳ ಹುದ್ದೆಗೆ ಮತ್ತು ಅದೇ ವೇತನ ಶ್ರೇಣಿಯಲ್ಲಿ ಪೂರ್ವಾನ್ವಯವಾಗುವಂತೆ ಮುಂದುವರೆಸಿ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಖಾಲಿ ಹುದ್ದೆಗೆ ಮರುಸ್ಥಳ ನಿಯುಕ್ತಿಗೊಳಿಸಲು ಆದೇಶಿಸಿದೆ.

| ಕ್ರಮ ಸಂ | ನೌಕರರ ಹೆಸರು ಹಾಗೂ ಹಿಂಬಡ್ತಿಗೊಳ್ಳುವ ಪೂರ್ವ ಕಾರ್ಯನಿರ್ವಹಿಸುತ್ತಿದ್ದ ಸ್ಥಳ | ಪ್ರಸ್ತುತ ನೇತ್ರಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಹಿರಿಯ ನೇತ್ರಾಧಿಕಾರಿಗಳ ಹುದ್ದೆಯಲ್ಲಿ ನಿಯುಕ್ತಿಗೊಳಿಸಿದ ಸ್ಥಳ | ಷರಾ |
|---|---|---|---|---|
| 01 | ಹೆಚ್. ಆರ್. ರಾಜು ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು. | ಪ್ರಾ.ಆ.ಕೇಂದ್ರ, ಹನಿಕೆ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ. | ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು. | |
| 02 | ಪಿ. ಶ್ರೀನಿವಾಸಯ್ಯ ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು. | ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು. (ಇಸಿಜಿ ತಂತ್ರಜ್ಞರ ಎದುರು ಹುದ್ದೆಗೆ) | ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು. | |
| 03 | ಬಿ.ಎಂ. ತಿಮ್ಮಯ್ಯ ಜಿಲ್ಲಾ ಆಸ್ಪತ್ರೆ, ಗದಗ | ಸಾರ್ವಜನಿಕ ಆಸ್ಪತ್ರೆ, ಆಲೂರು, ಹಾಸನ ಜಿಲ್ಲೆ. | ಜಿಲ್ಲಾ ಆಸ್ಪತ್ರೆ, ಗದಗ | |
| 04 | ಡಿ. ಮಂಜುಳ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು. | ಪ್ರಾ.ಆ.ಕೇಂದ್ರ, ಗಂಜಿಮಠ, ಮಂಗಳೂರು ಜಿಲ್ಲೆ. | ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು. | |

ಮೇಲ್ಕಂಡ ಆದೇಶವು ಜ್ಯೇಷ್ಠತೆ ಮತ್ತು ಸಮೀಕ್ಷೆಗೆ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ತೀರ್ಪು/ ಆದೇಶಕ್ಕೆ ಒಳಪಟ್ಟಿರುತ್ತದೆ.

ಲೋಕಸಭಾ ಸಾರ್ವತ್ರಿಕ ಚುನವಣಾ ಕಾರ್ಯಕ್ಕೆ ನಿಯೋಜಿತವಾಗಿರುವ ಅಧಿಕಾರಿ/ನೌಕರರು ಸದರಿ ಚುನವಣಾ ಮಾದರಿ ನೀತಿ ಸಂಹಿತೆ ಅವಧಿ ಪೂರ್ಣಗೊಂಡ ನಂತರ ನೇಮಕ ಮಾಡಿರುವ ಸ್ಥಳಕ್ಕೆ ಕೂಡಲೇ ವರದಿ ಮಾಡಿಕೊಳ್ಳತಕ್ಕದ್ದು ಮತ್ತು ವರದಿ ಮಾಡಿಕೊಂಡ ಬಗ್ಗೆ ನಿರ್ದೇಶನಾಲಯಕ್ಕೆ ಮಾಹಿತಿ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕು.ಕ.ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು/ಗದಗ.
3. ವೈದ್ಯಾಧಿಕಾರಿಗಳು, ಪ್ರಾ.ಆ.ಕೇಂದ್ರ, ಹನಿಕೆ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ./ ಪ್ರಾ.ಆ.ಕೇಂದ್ರ, ಗಂಜಿಮಠ, ಮಂಗಳೂರು ಜಿಲ್ಲೆ.
4. ವೈದ್ಯಕೀಯ ಅಧೀಕ್ಷಕರು, ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು/ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು.
5. ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಆಲೂರು, ಹಾಸನ ಜಿಲ್ಲೆ.
6. ಸಂಬಂಧಪಟ್ಟ ನೌಕರರಿಗೆ
7. ಕಛೇರಿ ಪ್ರತಿ.